57

**ಕರ್ನಾಟಕ ವಿಧಾನ ಪರಿಷತ್ತಿನ ಮಾನ್ಯ ಸದಸ್ಯರಾದ ಶ್ರೀ ಮರಿತಿಬ್ಬೇಗೌಡ ಇವರು ನಿಯಮ 330 ರಡಿಯಲ್ಲಿ ಪ್ರಸ್ತಾಪಿಸಿರುವ ಸೂಚನೆ.**

**ವಿಷಯ**

ಸರ್ಕಾರಿ ಪದವಿ ಕಾಲೇಜು/ವಿಶ್ವವಿದ್ಯಾನಿಲಯಗಳಲ್ಲಿ ದೀರ್ಘಕಾಲದಿಂದ ಉತ್ತಮವಾಗಿ ಕಾರ್ಯನಿರ್ವಹಿಸುತ್ತಿರುವ ಅತಿಥಿ ಉಪನ್ಯಾಸಕರು ಯು.ಜಿ.ಸಿ. ನಿಯಮಾವಳಿಗಳ ಪ್ರಕಾರ ಶೈಕ್ಷಣಿಕ ವಿದ್ಯಾರ್ಹತೆ ಹೊಂದಿದ್ದು, ಸೇವಾ ಭದ್ರತೆ ಇಲ್ಲದೆ ಇರುವುದರಿಂದ ಇವರಿಗೆ ಮುಂದಿನ ನೇಮಕಾತಿ ಸಂದರ್ಭದಲ್ಲಿ ಆದ್ಯತೆ ಮೇರೆಗೆ ವಯೋಮಿತಿ ಸಡಿಲಿಕೆ ಹಾಗೂ ಕೃಪಾಂಕ (ವೇಟೇಜ್) ನೀಡುವ ಬಗ್ಗೆ.

**<u>ಸರ್ಕಾರದ ಹೇಳಿಕೆ</u>**

ದಿನಾಂಕ:25.09.2009 ರ ಸರ್ಕಾರದ ಅಧಿಸೂಚನೆ ಸಂಖ್ಯೆ: ಇಡಿ 91 ಡಿಸಿಇ 2004 ರಲ್ಲಿ ಜಾರಿಗೊಳಿಸಿರುವ ಇಲಾಖೆಯ ವೃಂದ ಮತ್ತು ನೇಮಕಾತಿ ನಿಯಮಗಳಲ್ಲಿ ಸಹಾಯಕ ಪ್ರಾಧ್ಯಾಪಕರ ಹುದ್ದೆಗಳನ್ನು ಯು.ಜಿ.ಸಿ ನಿಯಮಾವಳಿಗಳಂತೆ ಶೇಕಡಾ 100 ರಷ್ಟು ನೇರ ನೇಮಕಾತಿ ಮೂಲಕ ಭರ್ತಿ ಮಾಡಲು ನಿಯಮಗಳನ್ನು ಜಾರಿಗೊಳಿಸಲಾಗಿರುತ್ತದೆ. ಆದರಂತೆ ಯು.ಜಿ.ಸಿ. ನಿಯಮಾವಳಿಗಳಲ್ಲಿ ಸಹಾಯಕ ಪ್ರಾಧ್ಯಾಪಕರ ಹುದ್ದೆಗಳಿಗೆ ಅರ್ಜಿ ಸಲ್ಲಿಸಲು ಅತಿಥಿ ಉಪನ್ಯಾಸಕರಿಗೆ ವಯೋಮಿತಿ ಸಡಿಲಿಕೆ ಹಾಗೂ ಕೃಪಾಂಕ (ವೇಟೇಜ್) ನೀಡಲು ಅವಕಾಶವಿರುವುದಿಲ್ಲ.

ಈ ಹಿಂದೆ 2014ರ ಸಹಾಯಕ ಪ್ರಾಧ್ಯಾಪಕರ ನೇಮಕಾತಿ ಪ್ರಕ್ರಿಯೆಯಲ್ಲಿ ಒಟ್ಟು 2160 ಸಹಾಯಕ ಪ್ರಾಧ್ಯಾಪಕರ ಹುದ್ದೆಗಳನ್ನು ಸ್ಪರ್ಧಾತ್ಮಕ ಪರೀಕ್ಷೆಯ ಮೂಲಕ ನೇರ ನೇಮಕಾತಿಯಿಂದ ಭರ್ತಿ ಮಾಡಲು ರೂಪಿಸಲಾಗಿದ್ದ ವಿಶೇಷ ನಿಯಮಗಳಲ್ಲಿ ಅತಿಥಿ ಉಪನ್ಯಾಸಕರಿಗೆ ವಯೋಮಿತಿ ಸಡಿಲಿಕೆ ಹಾಗೂ ಕೃಪಾಂಕ (ವೇಟೇಜ್) ನೀಡಿರುವುದಿಲ್ಲ.

2009ನೇ ಸಾಲಿನ ಉಪನ್ಯಾಸಕರ ನೇರ ನೇಮಕಾತಿ ಪ್ರಕ್ರಿಯೆಯಲ್ಲಿ ಅತಿಥಿ ಉಪನ್ಯಾಸಕರಿಗೆ ನೀಡಲಾಗಿದ್ದ ಕೃಪಾಂಕವನ್ನು ಪ್ರಶ್ನಿಸಿ ಶ್ರೀ ಕೆ. ಜಗನ್ನಾಥ ಮತ್ತು ಇತರರು ಮಾನ್ಯ ಕರ್ನಾಟಕ ಆಡಳಿತ ನ್ಯಾಯಮಂಡಳಿಯಲ್ಲಿ ಅರ್ಜಿ ಸಂಖ್ಯೆ: 953 ರಿಂದ 959/2009 ನ್ನು ಸಲ್ಲಿಸಿದ್ದು, ಇದಕ್ಕೆ ಸಂಬಂಧಿಸಿದಂತೆ ಮಾನ್ಯ ನ್ಯಾಯಮಂಡಳಿಯು ದಿನಾಂಕ:19.08.2009 ರಂದು ನೀಡಿದ ತೀರ್ಪಿನಲ್ಲಿ ಅತಿಥಿ ಉಪನ್ಯಾಸಕರಿಗೆ ನೀಡಲಾಗಿರುವ ಕೃಪಾಂಕವು ನಿಯಮಬಾಹಿರವಾಗಿರುತ್ತದೆ ಎಂಬ ನಿಲುವನ್ನು ವ್ಯಕ್ತಪಡಿಸಿರುತ್ತದೆ. ಸದರಿ ತೀರ್ಪನ್ನು ಪ್ರಶ್ನಿಸಿ ಶ್ರೀ ಶಂಕರ ಲಮಾಣಿ ಮತ್ತು ಇತರರು ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ರಿಟ್ ಅರ್ಜಿ ಸಂಖ್ಯೆ: 26902-14/2009(ಎಸ್-ಕೆಎಟಿ) ನ್ನು ಸಲ್ಲಿಸಿದ್ದು, ಸದರಿ ರಿಟ್ ಅರ್ಜಿಗೆ ಸಂಬಂಧಿಸಿದಂತೆ ಮಾನ್ಯ ಉಚ್ಚ ನ್ಯಾಯಾಲಯವು ದಿನಾಂಕ: 08.07.2013 ರಲ್ಲಿ ನೀಡಿದ ತೀರ್ಪಿನಲ್ಲಿ ಮಾನ್ಯ ಕರ್ನಾಟಕ ಆಡಳಿತ ನ್ಯಾಯಮಂಡಳಿಯ ನಿಲುವನ್ನು ಪುನರುಚ್ಚರಿಸಿರುತ್ತದೆ.

ಪ್ರಸ್ತುತ, ದಿನಾಂಕ:03.08.2019 ರ ಸರ್ಕಾರದ ಪತ್ರ ಸಂಖ್ಯೆ:ಇಡಿ/185/ಡಿಸಿಇ/2018, ರಲ್ಲಿ 2019-20 ಮತ್ತು 2020-21ನೇ ಸಾಲಿನಲ್ಲಿ ಒಟ್ಟು-1242 ಸಹಾಯಕ ಪ್ರಾಧ್ಯಾಪಕರ ಹುದ್ದೆಗಳನ್ನು ಭರ್ತಿ ಮಾಡಲು ಅನುಮತಿ ನೀಡಲಾಗಿದೆ. ಸದರಿ ಹುದ್ದೆಗಳನ್ನು ಭರ್ತಿ ಮಾಡುವ ಸಂಬಂಧ 2014ರ ವಿಶೇಷ ನೇಮಕಾತಿ ನಿಯಮಗಳನ್ನು ಆಧರಿಸಿಯೆ ವಿಶೇಷ ಕರಡು ನೇಮಕಾತಿ ನಿಯಮಗಳನ್ನು ರೂಪಿಸಿ, ದಿನಾಂಕ:10.02.2020ರ ಸರ್ಕಾರದ ಅಧಿಸೂಚನೆ ಸಂಖ್ಯೆ:ಇಡಿ/257/ಡಿಸಿಇ/2019(ಭಾಗ-3)ರಲ್ಲಿ ಪ್ರಕಟಿಸಲಾಗಿದ್ದು,

ಸಾರ್ವಜನಿಕರಿಂದ ಆಕ್ಷೇಪಣೆ/ಸಲಹೆಗಳನ್ನು ಆಹ್ವಾನಿಸಲಾಗಿದೆ. ಅದರಂತೆ ಸ್ವೀಕೃತಗೊಂಡಿರುವ ಆಕ್ಷೇಪಣೆ/ಸಲಹೆಗಳನ್ನು ಪರಿಶೀಲಿಸಲಾಗುತ್ತಿದೆ.

ಪ್ರಸ್ತುತ, ರಾಜ್ಯದ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಲ್ಲಿ ಒಟ್ಟು 14564 ಅತಿಥಿ ಉಪನ್ಯಾಸಕರುಗಳು ಕರ್ತವ್ಯ ನಿರ್ವಹಿಸುತ್ತಿದ್ದಾರೆ. ಈ ಅತಿಥಿ ಉಪನ್ಯಾಸಕರಲ್ಲಿ ಯು.ಜಿ.ಸಿ. ಅರ್ಹತೆಯಾದ ಎನ್.ಇ.ಟಿ, ಕೆ-ಸೆಟ್, ಪಿಹೆಚ್.ಡಿ, ಪದವಿಗಳನ್ನು ಪೂರೈಸಿರುವ ಹಾಗೂ ಪೂರೈಸದೆ ಇರುವ ಅತಿಥಿ ಉಪನ್ಯಾಸಕರ ವಿವರ ಈ ಕೆಳಕಂಡಂತಿದೆ.

| ಯು.ಜಿ.ಸಿ. ಅರ್ಹತೆಯನ್ನು ಪೂರೈಸಿರುವ ಉಪನ್ಯಾಸಕರ ಸಂಖ್ಯೆ | | ಯು.ಜಿ.ಸಿ. ಅರ್ಹತೆಯನ್ನು ಪೂರೈಸದೆ ಇರುವ ಉಪನ್ಯಾಸಕರ ಸಂಖ್ಯೆ |
|---|---|---|
| ಎನ್‌ಇಟಿ/ ಕೆ-ಸೆಟ್ | ಪಿಹೆಚ್‌ಡಿ | |
| 4031 | 1220 | 9313 |

ಇಡಿ 85 ಡಿಸಿಇ 2020

(ಡಾ: ಅಶ್ವಥ್ ನಾರಾಯಣ ಸಿ.ಎನ್.)
ಉಪ ಮುಖ್ಯಮಂತ್ರಿಗಳು (ಉನ್ನತ ಶಿಕ್ಷಣ)